
REVIEW OF RESEARCH
IMPACT FACTOR : 5.2331(UIF) UGC APPROVED JOURNAL NO. 48514 ISSN: 2249-894X
VOLUME - 7 | ISSUE - 7 | APRIL - 2018

# ಶಾಪಾಶಯಗಳಲ್ಲಿ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಒಂದು ನೋಟ (ಬೀದರ ಜಿಲ್ಲೆಯ ಶಾಸನ)




**ಕು. ಅಂಬಿಕಾ ಚೆನ್ನಪ್ಪಾ[1] , ಡಾ. ಇಂದುಮತಿ ಪಾಟೀಲ[2]**
[1]ಸಂಶೋಧನಾ ವಿದ್ಯಾರ್ಥಿ , ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
[2]ಸಹ ಪ್ರಾಧ್ಯಾಪಕರು, ತಿಹಾಸ ವಿಭಾಗ, ಸ್ನಾತಕೋತರ ಕೇಂದ್ರ,
ಸರಕಾರಿ ಮಹಾವಿದ್ಯಾಲಯ, ಕಲಬುರಗಿ

## ಪ್ರಸ್ತಾವನೆ :

ಹೈದ್ರಾಬಾದ ಕರ್ನಾಟಕದ ಇತಿಹಾಸದ ಪುನರ ರಚನೆಯಲ್ಲಿ ಪ್ರಾಚೀನ ಇತಿಹಾಸ ಬಹು ಮಹತ್ವ ಬೀರುತ್ತದೆ. ಶಾಸನಗಳು, ವೀರಗಲ್ಲು, ಮಹಾಸತಿ, ಹೀಗೆ . ದಾಖಲೆಗಳು ನಮಗೆ ಸಹಾಯಕವಾಗುತ್ತವೆ. ಚಾಲುಕ್ಯರ ಕಾಲದಿಂದ ದೊರೆತ ಶಾಸಬಗಳು ಮತ್ತು ಶಾಸನ ಶಿಲ್ಪಗಳು ಶಾಪಾಶಯಗಳನ್ನು ಹೊಂದಿದ್ದು ಅವು ಆ ಕಾಲದ ಇತಿಹಾಸ ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ರಾಜಕೀಯ ಅಧಿಕಾರ ವಿವರಣೆ, ಆರ್ಥಿಕ ಪರಿಸ್ಥಿತಿ, ಧಾರ್ಮಿಕ ವ್ಯವಸ್ಥೆಯಲ್ಲದೆ ಸಾಮಾಜಿಕ ವ್ಯವಸ್ಥೆ ತಿಳಿದುಬರುತ್ತದೆ. ಬೀದರ ಜಿಲ್ಲೆಯ ಶಾಸನಗಳ ಆಧಾರದ ಮೇಲೆ ಶಾಪಾಶಯಗಳ ಮೂಲಕ ಐತಿಹಾಸಿಕ ಮಾಹಿತಿ ವಿವರಿಸಲಾಗಿದೆ.

## ಶಾಪದ ಆಶಯ :

ಶಾಪಾಶಯಗಳಲ್ಲಿನ ಶಾಪಗಳು ಸಹ ತಮ್ಮ ಆಶಯ, ಧರ್ಮ, ಸಂಪತ್ತು, ಹಾಳಾಗದೇ ಚಿರಕಾಲ ಉಳಿಯಲಿ ಎಂಬುದಾಗಿದೆ.

## ಶಾಪಾಶಯಗಳ ಹುಟ್ಟು ಮತ್ತು ಬೆಳವಣಿಗೆ :

ಕೊಟ್ಟಿದಾನವನ್ನು ಉಳಿಸಿಕೊಂಡು ಹೋಗುವ ಆಶಯವೇ ಈ ಶಾಪಾಶಯಗಳ ಹುಟ್ಟಿಗೆ ಕಾರಣವಾಗಿದೆ. ವೇದ ಪುರಾಣಗಳನ್ನು ಓದಿ ಅರ್ಥೈಸಿಕೊಂಡ ಬ್ರಾಹ್ಮಣರಿಂದಲೇ ಇವು ಹುಟ್ಟಿರಬೇಕು. ಶಾಸನಗಳು ಹೊರಡಿಸುವವರು ತಮ್ಮ ಶಾಸನ ಹೆಚ್ಚು ಕಾಲ ಇರಬೇಕೆಂದು ಶಿಲೆಗಳಲ್ಲಿ ಕೊರೆಯಿಸಿದರು. ಆದರೆ ಕೆಲವು ಸಂದರ್ಭಗಳಲ್ಲಿ ಶಿಲಾ ಶಾಸನಗಳು ರಾಜಕೀಯ ಬದಲಾವಣೆಗಳಿಂದ ಶತ್ರುಗಳಿಂದ ಇವು ಹಾಲಾಗಲು ಆರಂಭವಾದವು. ಇದರಿಂದ ತಮ್ಮ ಶಾಸನಗಳನ್ನು ರಕ್ಷಿಸಿಕೊಳ್ಳಲು, ಪುರಾಣಗಳಲ್ಲಿ ಬರುವ ಶಾಪಗಳನ್ನು ಅಥವಾ ಬೈಗಳನ್ನು ಶಾಸನದ ಕೊನೆಯಲ್ಲಿ ಕೊರೆಯಿಸಲಾರಂಭಿಸಿದರು. ಬೀದರ ಜಿಲ್ಲೆ ಶಾಸನಗಳಲ್ಲಿ ಅತಿ ಅಂತ್ಯ ಅಥವಾ ಅತಿ ಮಧ್ಯದಲ್ಲಿ ಕಂಡು ಬರುತ್ತದೆ.

ಆರಂಭದಲ್ಲಿ ಶಾಪಾಶಯಗಳು ತಾಮ್ರ ಶಾಸನಗಳಲ್ಲಿ ಅಧಿಕವಾಗಿ ಕಾಣುತ್ತೇವೆ. ಏಕೆಂದರೆ ತಾಮ್ರ ಶಾಸನಗಳು ಹೆಚ್ಚಾಗಿ ವ್ಯಯಕ್ತಿಕ ದಾನದ ಆಸ್ತಿಗಳಿಗೆ ಸಂಬಂಧಿಸಿದ್ದು, ಅವರು ತಮ್ಮ ಪರ್ವಜರು ಸ್ವಂತಿಕೆಯನ್ನುಳಿಸಿಕೊಳ್ಳುವ ಆಶಯದಿಂದ ಶಾಪಾಶಯಗಳನ್ನು ಹಾಕಿದರು. ಶತ್ರುಗಳಿಂದ ತಮಗೆ ಆಗದೇ ಇರುವ ಜನರಿಂದ ಹಾಳಾಗುವ, ಕಳುವಾಗುವ ಭಯವು ಮತ್ತು ರಕ್ಷಿಸಬೇಕೆಂಬ ಮನೋಭಾವವು ಈ ಶಾಪಾಶಯಗಳನ್ನು ಹೊರಡಿಸಲು ಪ್ರೇರೆಪಿಸಿತು. ಶಾಪಾಶಯಗಳನ್ನು ಜನರಿಗೆ ಮನದಟ್ಟು ಮಾಡಲು ಅವರು ವೇದ, ಪುರಾಣಗಳ, ವ್ಯಾಸ, ಮಹಾಭಾರತದಲ್ಲಿ ಉಲ್ಲೇಖಿತವಾಗಿವೆ ಎಂದು ತಿಳಿಸುತ್ತಿದ್ದರು.

> **‘ಅಪಿಚಾತ, ಮನುಗೀತಾಃ ಶ್ಲೋಕಾಃ ಎಂದೋ,**
> **ಅತ್ರ ,ಮನುಗೀತಾ ಶ್ಲೋಕಾ ಭವಂತಿ ಇಲ್ಲವೇ**
> **ಉಕ್ತಂ ಚ ಭಗವತಾ ವೇದವ್ಯಾಸೇನ’**

ಎಂದೋ ಹೇಳಿ ಶಾಪಾಶಯಶ್ಲೋಕಗಳನ್ನು ರಚಿಸುತ್ತಿದ್ದರು. ವೇದವ್ಯಾಸರ ಮಹಾಭಾರತದಲ್ಲಿ ಇವು ಲಭ್ಯವಿಲ್ಲ. ಆದರೆ ಪುರಾಣಗಳಲ್ಲಿ ಶಾಪಾಶಯಗಳಿವೆ. [1](ಕ.ಶಾ.ಶಾ. – ಡಾ.ದೇವರಕೊಂಡಾರಡ್ಡಿ – 2007–08 ಪು.–2) ಕನ್ನಡದಲ್ಲಿ ದೊರೆತ ಪ್ರಾಚೀನ ಶಾಸನದಲ್ಲಿಯು ‘ಇದನ್ನು ಕೆಳ್ದೋನ್ ಮಹಾಪಾತಕನ್’ ಎಂದಿದೆ.

7ನೇಯ ಶತಮಾನದಲ್ಲಿ ಸಂಸ್ಕೃತ – ಪ್ರಾಕೃತ ಪದ್ಯಗಳ ಮಿಶ್ರಣದಿಂದ ಶಾಪಾಶಯಗಳು ರಚಿತವಾದವು. ಸು.ಕ್ರಿ.ಶ.700ರಿಂದ ಇಚಿಗೆ ತಾಮ್ರಪದಗಳಲ್ಲದೇ ಶಿಲಾಶಾಸನಗಳಲ್ಲೂ ಶಾಪಾಶಯಗಳು ಕೊರೆಯಿಸಲಾರಂಭಿಸಿರಬಹುದು. ಧರ್ಮಶಾಸ್ತ್ರಗಳಿಂದ ಶ್ಲೋಕಗಳನ್ನು ಉದಾಹರಿಸಿರುವ ಪ್ರಾಚೀನ ಕನ್ನಡ ಶಿಲಾಶಾಸನಗಳಲ್ಲಿ 8ನೇ ಶತಮಾನದ ಪಟ್ಟದಕಲ್ಲಿನ ಶಾಸನವೂ ಒಂದಾಗಿದೆ. [2](ಕ.ಶಾ.ಸಾಂ.ಅ.ಡಾ.ಎಮ್ ಚಿಂದಾನಂದ ಮೂರ್ತಿ. ಪು 58)

"ದಾನಪಾಲಿನ ಯೋರ್ ಮಧ್ಯ ದಾನಾಚ್ಚೇಯೋನು ಪಾಲನಂ, ದಾನಾತ್ ಸ್ವರ್ಗಂ ಅವಾಪ್ನೋತಿ ಪಾಲನಾತ್ ಅಚ್ಯತಂ ಪದಂ" ದಾನವನ್ನು ಕೊಡುವುದು ಮತ್ತು ಕೊಟ್ಟ ದಾನವನ್ನು ಪಾಲಿಸುವುದು. ಇವುಗಳಲ್ಲಿ ದಾನವನ್ನು ಪಾಲಿಸುವುದೇ ಹೆಚ್ಚು ಶ್ರೇಯಸ್ಕರವಾದುದು, ದಾನವನ್ನಿತ್ತವರು ಸ್ವರ್ಗವನ್ನು ಪಡೆದರೆ, ಅದನ್ನು ಪರಿಪಾಲಿಸಿಕೊಂಡು ಬಂದವರು ಅಚ್ಯುತ ಪದವಿಯನ್ನು ಪಡೆಯುತ್ತಾರೆ.[3](ಕ.ಸಂ.ಸ.ಡಾ.ಹ.ತಿಪ್ಪೇರುದ್ರಸ್ವಾಮಿ – ಪು–251) ಆದರೆ ಎಷ್ಟರ ಮಟ್ಟಿಗೆ ಈ ಶಾಪಾಶಯಗಳು ಶಾಸನಗಳ ಧರ್ಮ ಉಳಿಸಿವೆ. ಎಂಬ ಪ್ರಶ್ನೇ ನಮ್ಮಲಿ ಮೂಡುತ್ತದೆ.

ರಾಜಕೀಯ ಸ್ಥತ್ಯಂತರ, ವರ್ಗಗಳ ಪ್ರಬಲೀಕರಣಗಳಿಂದ ದಾನಭೂಮಿ ಕಸಿದುಕೊಳ್ಳಲ್ಪಡುತ್ತಿದ್ದವು ಈ ಪ್ರಕ್ತಿಯೆ ಮುಂದುವರೆಯುತ್ತಾ ಬಂದಂತೆ ಆಶಯಗಳಲ್ಲಿ ಶಾಪಾಶಯಗಳು ಸೇರಿಕೊಂಡು ಬೆಳವಣಿಗೆ ಹೊಂದಿದವು.

ರಾಜನ ಸಂದೇಶಗಳು, ಆಜ್ಞೆಗಳು, ಬರಹಗಳು ಮುಂದೆ ಶಾಶ್ವತವಾಗಿರಲಿ ಎಂಬ ಆಶಯದಿಂದ ಶಿಲೆಯ ಮೇಲೆ ಕೊರೆಯಿಸಲಾರಂಭಿಸಿದರು. ಹೀಗೆ ಕೊರೆಯಲ್ಪಟ್ಟ ಶಿಲಾಬರಹಗಳೇ ಶಾಸನಗಳೆಂದೆನಿಸಿದವು. ಮುಂದೆ ಅದು ಸಾಮಂತರು, ಮಾಂಡಳಿಕರು, ರಾಜಮನೆತನದವರು, ಅಧಿಕಾರಿಗಳಿಗೆ ನೇಮಿತವಾಗಿರದೇ ಸಾಮಾನ್ಯ ಜನರು ತಾವು ಮಾಡಿದ ದಾನದ ಧರ್ಮವು ಸಾಕ್ಷಿಯಾಗಿ ಉಲ್ಲೇಖಿತವಾಗಿದೆ.

## ಶಾಪಾಶಯಗಳಲ್ಲಿ ರಾಜಕೀಯ ವ್ಯವಸ್ಥೆ :

ಶಾಪಾಶಯಗಳಲ್ಲಿ ಆಡಳಿತ ವಿಭಾಗಗಳ ಬಳಕೆಯಾಗಿದೆ. ಗೋರ್ಟಾ (ಬಿ) ಗ್ರಾಮದಲ್ಲಿನ ಶಾಸನ " ಇ ಧರ್ಮ್ಮವಂ.....ಮತ್ತೆ ಮಂಡವಕ್ಕಧಿಕಾರಿಗಳಾಗಿ.... ಯಾರು ಒಂದಡೆ ತಪ್ಪದೆ ಪ್ರತಿಪಾಳಿಸುವರು। ಅದೇ ಗ್ರಾಮದ ಇನ್ನೊಂದು ಶಾಸನ ಈ ಧರ್ಮವಲ ಮತ್ತೆ ಮಣ್ಣವಕ್ಕಧಿಕಾರಿಗಳಾಗಿ ಯಾರು ಬಂದಡಂ ತಪ್ಪ(ದೆ) ಪ್ರತಿಪಾಳಿಸುವರು ಈ ಶಾಸನಗಳಿಂದ.

## ಶಾಪಾಶಯಗಳಲ್ಲಿ ಆರ್ಥಿಕ ವ್ಯವಸ್ಥೆ :

ನಾವು ಶಾಪಾಶಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಅಲ್ಲಿ ಬಂಡವಾಳ ಕ್ರೂಢಿಕರಣವಾಗುತ್ತಿರುವುದು, ಶ್ರೀಮಂತರು–ಶ್ರೀಮಂತರಾಗುತ್ತಿರುವುದು, ಬಡವರು ಬಡವರಾಗುತ್ತಿರುವುದು ಇಲ್ಲಿ ಕಂಡುಬರುತ್ತದೆ. ಬ್ರಾಹ್ಮಣ ವರ್ಗ, ಅಧಿಕಾರವರ್ಗ, ಧಾರ್ಮಿಕ ಸಂಘ, ಸಂಸ್ಥೆಗಳಲ್ಲಿ ದೇವಾಲಯಗಳಲ್ಲಿ ಅವರಲ್ಲಿಯೇ ಕೇಂದ್ರೀಕರಿಸಲ್ಪಟ್ಟಿತೆಂದು ಹೇಳಬಹುದು. ಇಲ್ಲಿ ದಾನ ಪಡೆದವನ ಹಿತರಕ್ಷಣೆಯನ್ನು ಪ್ರಮುಖವಾಗಿದ್ದು, ಆ ಭೂಮಿಯೇ ತನ್ನ ದೈವ ಎಂದು ತಿಳಿದು ದುಡಿಯುವ ಶ್ರಮ ಜೀವಿಗಳ ಬಗ್ಗೆ ನಿರಾಕರಿಸಿದಂತೆ ತೋರುತ್ತದೆ. ಇದರ ಆಶಯ ಭೂಮಾಲಿಕನ ಹಿತಾಸಕ್ತಿ ಕಾಪಾಡುವುದೇ ಆಗಿದೆ. ಬಡ ಜನರು, ಶ್ರಮ ಜೀವಿಗಳು ಯಾವಾಗ ತಮಗೆ  ಶ್ರಮಿಸುವ ಯೋಗ್ಯ ಭೂಮಿ ದೊರೆಯದಿದ್ದಾಗ ಅವರು ಇಲ್ಲಿ ಅಧಿಕವಾಗಿ ಭೂಮಿ ಕ್ರೂಢಿಕರಿಸಲ್ಪಟ್ಟಿತೋ ಅಂಥವರಿಂದ ಕಸಿದುಕೊಳ್ಳುವ ಮತ್ತು ಕದಿಯುವ ಪ್ರಕ್ರಿಯೆ ಆರಂಭವಾಗಿದ್ದ ಬಗ್ಗೆ ಈ ಶಾಪಾಶಯಗಳು ಸೂಕ್ಷ್ಮವಾಗಿ ನಮ್ಮಗೆ ತಿಳಿಸುತ್ತವೆ. ಎಂದು ಹೇಳಬಹುದು. ಈ ರೀತಿ ದಾನಗಳ ಪ್ರಕ್ರಿಯೆಯಿಂದ ಬಂಡವಾಳ ಶಾಹಿತ್ವ ಇಲ್ಲಿ ಬೆಳೆದು ಬಂದು ಶ್ರಮ ಜೀವಿಗಳು ಅವರ ದಾಸರಾಗಿ, ಜೀತಪದ್ದತಿ ಬೆಳವಣಿಗೆಯಿಂದ ಪ್ರಕ್ರಿಯೆಯೂ ಇಲ್ಲಿ ಕಂಡುಬರುತ್ತದೆ.

## ಶಾಪಾಶಯಗಳಲ್ಲಿ ಸಾಮಾಜಿಕ ವ್ಯವಸ್ಥೆ ಮತ್ತು ಸಾರ್ವಜನಿಕರ ಕರ್ತವ್ಯಗಳ ಕುರಿತು ವಿವರಣೆ :

- ಸಾರ್ವಜನಿಕ ಜವಾಬ್ದಾರಿ ಏನೆಂಬುದು ತಿಳಿಸುತ್ತವೆ. [4] (ಕ.ವಿ.ಶಾ.ಸಂ.–8) ಅನೇಕ ಶಾಸನಗಳಲ್ಲಿ ತಿಳಿಸುತ್ತವೆ.
- ಶಾಪಾಶಯಗಳಲ್ಲಿ ಸಮಾಜ ಯಾವ ರೀತಿಯ ನಡೆ, ನುಡಿ, ಸಂಸ್ಕೃತಿ ಹೊಂದಿತ್ತು ಎಂಬುದು ಪರೋಕ್ಷವಾಗಿ ತಿಳಿಸುತ್ತದೆ ಉದಾ : ದಾನ ಕಬಳಿಸುವದು, ಒಬ್ಬರಾಜ ಅಥವಾ ಅಧಿಕಾರಿ ನೀಡಿರುವದನ್ನು ಕಬಳಿಸಿಕೊಳ್ಳಬಾರದೆಂದು ತಿಳಿಸುತ್ತವೆ.
- ಪಾಪ–ಪುಣ್ಯ, ಧರ್ಮ–ಅದರ್ಮ, ಸ್ವರ್ಗ–ನರಕ ಇತ್ಯಾದಿ ಕಲ್ಪನೆಗಳಿಂದ ಸಂಘಗಳನ್ನು, ಸಮಾಜ ಮತ್ತು ಸಾರ್ವಜನಿಕರನಲ್ಲದೆ, ಅಧಿಕಾರ ಶಾಹಿಗಳನ್ನು ನಿಗ್ರಹಿಸುವ ಪ್ರಯತ್ನ ಮಾಡಿದೆ. ತಮ್ಮ ನಡೆ–ನುಡಿ ಇತರರಿಗೆ ಭಾಧಿಸದಂತೆ ನೋಡಿಕೊಳ್ಳುವ ಉತ್ತಮ ವಿಚಾರ ತಿಳಿಸುತ್ತದೆ.
- ಸ್ಥಾನಾಚಾರ್ಯರು ದಾನದ ದುರುಪಯೋಗ ಮಾಡಿಕೊಂಡಾಗ ಅವರನ್ನು ಸ್ಥಾನದಿಂದ ತೆಗೆಯುವಂತೆ ಅವರು ಸತ್ತಾಗ ಹಂದಿ, ನಾಯಿ, ಕತ್ತೆಗೆ ಸಮಾನ ಎಂದು,
- "ಸ್ವದತ್ತಂ ಪರದತ್ತಂ.........ಕ್ರೀ ಮಿಃ" ಎಂದು ತಿಳಿಸುವ ಬೋಧನ ಶಾಸನವು ಜಾತಿ ಬಗ್ಗೆಯೂ ತಿಳಿಸುತ್ತದೆ. ಅಂದರೆ ಪೂಜೆಗೆ ಅರ್ಹ ಇಲ್ಲಿ ಬ್ರಾಹ್ಮಣರಲ್ಲದೆ ಶೂದ್ರರಲ್ಲಿ ಎಂಬ ಸ್ಪಷ್ಟ ಉಲ್ಲೇಖ ಶಾಸನಗಳಲ್ಲಿ ತಿಳಿಸುತ್ತದೆ.
- 'ಜ್ಞಾನ ಗುಣಂ ಸೌರ್ಯ್ಯಗುಣಂದಾನ ಗುಣಂ ಪರಹಿತಾರ್ತ್ಥದ' ಎಂಬ ಶಾಸನ ಹಿಲಾಲಪುರದಲ್ಲಿ ಉಲ್ಲೇಖಿತವಾಗಿದೆ. ಪರಹಿತವೇ ಶ್ರೇಷ್ಠವಾದ ಗುಣವಾಗಿದೆ.
- ಮುಚಳಂಬ ಶಾಸನದಲ್ಲಿ ಇನ್ತಿ ಧರ್ಮವೆಲ್ಲಂ ನೈಷ್ಠಿಕ ಸ್ಥಾನವಾಗಿ ನಡೆವನ್ತಾಗಿ.....ನಡೆಸಿ ಅವರ ಕಾರ್ಯ ಬಗ್ಗೆ ತಿಳಿಸುತ್ತದೆ.
- ದೇವ ಕಾರ್ಯ್ಯಮಂ ನಡೆಯಿಸುವದು ನಡೆಯಿಸದಿರ್ದ್ದವರು ಶ್ರೀ ವಾರಣಾಸಿಯಲು ಕಪಿಲೆಯ ಕೊಂದ ಗದ್ದೆ ಮಾವಕತ್ತಿತ ಮಾಡಿದವರು॥ ಪ್ರತಿಯೊಬ್ಬ ಧರ್ಮವನ್ನು ರಕ್ಷಣೆ ಮಾಡಬೇಕುವಿಲ್ಲ ತೊಂದರೆಗಳು ತಪ್ಪಿದಿಲ್ಲ.

**ಶಾಪಾಶಯಗಳಲ್ಲಿ ಸ್ತ್ರೀಯರು :**

ಸ್ತ್ರೀಯರನ್ನು ಪುರುಷರು ನಿಯಂತ್ರಣವಿಟ್ಟು ಕೊಂಡಂತೆ ಆ ಸಮಾಜದಲ್ಲಿ ಅವನ ಶ್ರೇಷ್ಠತೆ ಹೆಚ್ಚಾಗುತ್ತಿತ್ತು. ಪುರುಷರ ಸ್ವಾಧೀನದಲ್ಲಿರುವ ಒಂದು ಸ್ವತ್ತು, ಅವರ ಅಧೀನವಾಗಿ ಸ್ತ್ರೀ ಬದುಕುತ್ತಿದ್ದಳು. ಅವಳದೇಯಾದ ಅಸ್ತಿತ್ವ, ಭಾವನೆಗೆ ಇಲ್ಲಿ ಬೆಲೆ ಇಲ್ಲಿರಲಿಲ್ಲ.

ಆದರೆ ಸ್ತ್ರೀವಧೆ ಮಹಾಪಾತಕ ಎಂಬುದರ ಮೂಲಕ ಸ್ತ್ರೀ ರಕ್ಷಣೆ ಮಾಡಬೇಕು ಎಂಬ ಆಶಯ ಶಾಪಾಶಯದಲ್ಲಿ ಆರಂಭದಲ್ಲಿತ್ತು. ಸ್ತ್ರೀಯರಿಗೆ ಗೌರವ ಸ್ಥಾನ ನೀಡದಿರುವರು ಅವರ ಶತ್ರುಗಳು ಎಂದು ಅವರ ರಕ್ಷಣೆಯೇ ಪುರುಷರ ಆದ್ಯ ಕರ್ತವ್ಯ ಎಂದು ತಿಳಿಸುವ ಈ ಶಾಪಾಶಯಗಳು ಮುಂದೆ ಪುಣ್ಯಮಾಡಿದ ಪುರುಷರ ಆಯುಷ್ಯ ಹೆಚ್ಚುತ್ತದೆ ಎಂಬ ನಂಬಿಕೆ. ಯಾರು ಧರ್ಮ ನಾಶ ಮಾಡುತ್ತಾರೋ ಅವರ ಪತ್ನಿ, ತಾಯಿ, ಸಹೋದರಿ, ತಾಯಿಯ ತಂಗಿ, ಸೋಸೆ ಇತ್ಯಾದಿ ಸ್ತ್ರೀ ಸಂಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವಾಚ್ಯ ಬೈಗಳಲ್ಲಿ ಶಾಪಾಶಯಗಳನ್ನು ಕೊರೆದರು.

ಸ್ತ್ರೀಯರ ಸ್ಥಾನಮಾನ ಹೇಗಿತ್ತು ಎಂದು ಸೂಕ್ಷ್ಮವಾಗಿ ನೋಡಿದರೆ, ಅವಳ ಸ್ಥಾನಮಾನ ಹೆಸರಿಗೆ ಉನ್ನತವೆಂಬಂತೆ ಕಂಡಿದರೂ ಆಕೆಯೂ ಸೇವೆ, ದಾನ, ಬೋಗಕ್ಕೆ ಉಪಯೋಗಿಸಲ್ಪಡುವ ಒಂದು ಸಂಪತ್ತು ಮತ್ತು ಗುಲಾಮಳಾಗಿ ಕಂಡುಬಂದಿರುವುದು ಈ ಶಾಪಾಶಯಗಳಲ್ಲಿ ತಿಳಿದುಬರುತ್ತದೆ.

**ಶಾಪಾಶಯಗಳಲ್ಲಿ ಸಂಖ್ಯಾಸೂಚಕಗಳು :**

ಸಾಸಿರ, ಷಷ್ಠಿರ್ವರ್ಷ, ಕೋಟಿ, ಏಕ್ಕೋಟಿ, ಅನಂತ, ಶತಸಹಸ್ರ, ಸಾಸಿರ್ವರ್ ಇತ್ಯಾದಿ.

**ನಂದಿಗಳ ಉಲ್ಲೇಖ :** ಗಂಗೆ

**ಅಲಂಕಾರ : ಬಸವಕಲ್ಯಾಣ ಶಾಸನ [5] (ಕ.ವಿ.ಸಂ.–8 ಪು–21)**

'ಸಾಯಿರ ವೇದ ಪಾರಗಪ್ಪ ಬ್ರಾಹ್ಮಣಗೆ ಸಾಯಿರ ಕವಿಲೆಯ ಮ ಕೊಟ್ಟ ಫಲ' ಸಾವಿರ ವೇದ ಪಾರಾಯಣ ಮಾಡುವ, ಸಾವಿರ ಗೋವುಗಳನ್ನು ಕೊಟ್ಟ ಪುಣ್ಯ ದೊರೆಯುತ್ತದೆ ಎಂದು ಅರ್ಥ.

ಬಸವಕಲ್ಯಾ ಶಾಸನದಲ್ಲಿ **"ದರ್ಮವಂ ಪ್ರತಿ ಪಾಳಿಸಿದ ವರ್ಗ್ಗೆ ಕುರುಕ್ಷೇತ್ರ ವಾರಣಾಸಿ ಪ್ರಯೊಗೆಯಲು ವೇದ ಪಾರಗರಪ್ಪ ಬ್ರಾಹ್ಮಣರಿಗೆ ಸೂರ್ಯ ಗ್ರಹಣದಲು ಗೋ ಸಹಸ್ರಮಕೊಟ್ಟ ಪುಣ್ಯದ ಫಲವಲ ಪಡೆದವರು॥ ಇನ್ತೀ ಧರ್ಮ್ಮಮಂ ಕಿಡಿಸಿದವರು ವಾರಣಾಸಿಯಲು ಗೋ ಬ್ರಾಹ್ಮಣ ವಧಿಯಿಸಿದ ಪಾತಕದ ಫಲಮನೆಯ್ದುವರು ..."**

(ಈ ಧರ್ಮವನ್ನು ಪಾಲಿಸಿಕೊಂಡು ಬಂದವರಿಗೆ ಗಂಗಾನದಿ ಹರಿಯುವ ವಾರಾಣಾನೆ, ಕುರುಕ್ಷೇತ್ರದಲ್ಲಿ ನಾಲ್ಕು ವೇದಗಳಲ್ಲಿ ಪರಿಣಿತರಾದ ಬ್ರಾಹ್ಮಣರಿಗೆ ಸೂರ್ಯಗ್ರಹಣದ ಸಂದರ್ಭದಲ್ಲಿ ಒಂದು ಸಾವಿರ ಹಸುಗಳು ಕೊಟ್ಟ ಪುಣ್ಯಪ್ರಾಪ್ತವಾಗುತ್ತದೆ.) ಹೀಗೆ ಬೀದರ ಜಿಲ್ಲೆ ಶಾಸನಗಳಲ್ಲಿ ಈ ಸಾರಗಳ ಮಾಹಿತಿಯನ್ನು ದೊರೆಯುತ್ತದೆ.

**ಪ್ರಾಣಿಗಳ ಉಲ್ಲೇಖ :**

ಶಾಪಾಶಯಗಳಲ್ಲಿ ಆಕಳು/ಹಸುವನ್ನು ಉಲ್ಲೇಖವಾಗಿರುವುದು. ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿದೆ. ಬಸವಕಲ್ಯಾಣ ಶಾಸನ [6] (ಕ.ವಿ.ಸಂ.–8 ಪು.32) ದಲ್ಲಿ "ದೇವರ ಭೂಮಿ ಈ ಧ(ರ್ಮ)ವ ಕಿಡಿಸಿದವರು ಸ್ವಾನ ಗಾರ್ದ್ದಭ ಚಾಂ.........(ಧರ್ಮವನ್ನು ಹಾಳು ಮಾಡಿದವನು ನಾಯಿ, ಕತ್ತೆ ಜನ್ಮತಾಳುವನು ಎಂದಿದೆ.

**ವಿಮರ್ಶೆ :**

ಶಾಪಾಶಯಗಳು ಮುಂದೆ ತಮ್ಮ ಆಶಯವನ್ನು ದಾನದ ಧರ್ಮವನ್ನು ಉಳಿಸಲು ಅವರೇ ಧರ್ಮವನ್ನು ಮರೆತು ಪರರನ್ನು, ಇತರ ಪ್ರಾಣಿಗಳನ್ನು ಸ್ತ್ರೀಯರನ್ನು, ಅನೇಕ ವರ್ಗದ ಜನರು ಸಮಾಜದ ಹಲವು ಸಂಬಂಧಗಳನ್ನು ತಮ್ಮ ಮನಬಂದಂತೆ ಉಪಯೋಗಿಸಿಕೊಂಡು ಅಪಮಾನ ಮಾಡುವುದರಲ್ಲೇ ತಮ್ಮ ಧರ್ಮ ಹುಡುಕಿಕೊಂಡಂತೆ ಕಾಣುತ್ತದೆ.

ದಾನವೆಂಬ ಧರ್ಮ ಉಳಿಸುವ ಹೆಸರಲ್ಲಿ ತಮ್ಮ ಹೆಸರಿನ ಅಮರತ್ವ ಪಡೆಯುವ ಸ್ವಾರ್ಥತೆಯೂ ಶಾಪಾಶಯಗಳಲ್ಲಿ ಕಂಡುಬಂದಿದೆ. ಇಂತಃ ಆಶಯ ನೆರವೇರಿಸಿಕೊಳ್ಳಲು, ಅವರನ್ನು ಅವರ ರಕ್ಷಿಸಿಕೊಳ್ಳಲು ಆರಂಭದಲ್ಲಿ ಪವಿತ್ರ ಸ್ಥಳ, ಜಲ, ಪ್ರಾಣಿ ಮತ್ತು ಮಾನವ ಎನಿಸಿಕೊಂಡ ಕಾಶಿ, ವಾರಾಣಾಸಿಗಂಗೆ, ನರ್ಮದಾ, ಗೋವು, ಬ್ರಾಹ್ಮಣರನ್ನು ಮತ್ತು ಸ್ವರ್ಗ–ನರಕ ಎಂಬಂಶಗಳನ್ನು ಉಪಯೋಗಿಸಿಕೊಂಡರು.

ಕೆಲವು ಕಾಲಾನಂತರ ಪವಿತ್ರತೆಯ ಜೊತೆಗೆ ಅವಿವಿತ್ರವಾದ ಅಂಶಗಳನ್ನು ಬಳಕೆ ಮಾಡಲಾರಂಭಿಸಿದರು. ಅವಾಚ್ಯ ಶಬ್ದಗಳಿಂದ ಕೂಡಿದ ಸಂಕೀರ್ಣ ಬೈಗಳಾಗಿ ಒಂದು ಧರ್ಮ ಮತ್ತು ಧಾನದ ಮೌಲ್ಯ ಉಳಿಸಿಕೊಳ್ಳಲು ಹೀಗೆ ಮಾಡಿದರು.

ಇದನ್ನು ಹಾಳು ಮಾಡಿದರೇ ನರಕಕ್ಕೆ ಬಾಜನರಾಗುವರು ಎಂಬ ಕಲ್ಪನೆ ಮೂಡಿಸಿ ಸಮಾಜದ ಸಂಬಂಧಗಳನ್ನು ನಿಗ್ರಹಿಸುವ ಆಶಯವೂ ಪರೋಕ್ಷವಾಗಿ ಇದರಲ್ಲಿ ಅಡಕವಾಗಿರುವುದು ಕಂಡು ಬರುತ್ತದೆ.

"ಸ್ವದತ್ತಂ ಪರದತ್ತಂ ವಾ, ಯೊ। ಹರೇತಿ ವಸುನ್ದರಾ ಷಷ್ಠಿರ್ವ್ವರ್ಷ ಸಹಸ್ರಾಣಿ ಮಿಷ್ಟಾಯಾಂ ಜಾಯತೇ ಕ್ರಿಮಿ॥ ಎಂದು ತಿಳಿಸುತ್ತದೆ. ಸ್ವಯಂವಾಗಿ ರಕ್ಷಣೆಮಾಡಬೇಕು. ಪರವಸ್ತು ಅಥವಾ ಸಂಪತ್ತು ಸರಿಯಾಗಿ ರಕ್ಷಣೆಮಾಡದೇ ಹೊದರೆ ಅನೇಕ ವರ್ಷಗಳವರೆಗೂ ಕ್ರಿಮಿ ಕೀಟವಾಗಿ ಜನ್ಮಿಸುತ್ತಾರೆ ಎಂದು ಉಲ್ಲೆಖ ಅವುಗಳ ಸಂಪತ್ತು ಎಂಬ ಭಾಸವಾಗಬೇಕಾಗಿತ್ತು.

**ಆಕರ ಗ್ರಂಥಗಳು:**


1. ಡಾ.ದೇವರಕೊಂಡಾರಡ್ಡಿ, ಕನ್ನಡ ಶಾಸನಗಳ ಶಾಪಾಶಯಗಳು (ಕ.ಶಾ.ಶಾ.), 2007–08 ಪು.–2
2. ಡಾ.ಎಮ್ ಚಿಂದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಕ ಅಧ್ಯಾಯ, ಪು 58
3. ಕ.ಸಂ.ಸ.ಡಾ.ಹ.ತಿಪ್ಪೇರುದ್ರಸ್ವಾಮಿ – ಪು–251
4. ಕ್ನಡ .ವಿಶ್ವವಿದ್ಯಾಲಯ.ಶಾಸನ.ಸಂ.–8
5. **ಕ.ವಿ.ಸಂ.–8 ಪು–21**
6. ಕ.ವಿ.ಸಂ.–8 ಪು.32